INDIAN JOURNAL OF HISTORY AND ARCHAEOLOGY

ISSN (e):2582-225X
Vol-3, Issue -1, May-June, 2021, Page No,65-71
Peer Reviewed Journal, Referred Journal

# ಹರಳುಕೋಟೆ ಗ್ರಾಮದ ಸ್ಮಾರಕ ಶಿಲ್ಪಗಳ ಒಂದು ಚಾರಿತ್ರಿಕ ನೋಟ

ಸುರೇಶ ಬಿ.[1]

ಹರಳುಕೋಟೆ ಗ್ರಾಮವು ಚಾಮರಾಜನಗರಕ್ಕೆ 5 ಕಿ.ಮೀ. ದೂರದಲ್ಲಿರುವ ಒಂದು ಬೇಚರಾಕ್ ಗ್ರಾಮ ಇಲ್ಲಿ ಎರಡು ಸುತ್ತು ಮಣ್ಣಿನ ಕೋಟೆ ಇದ್ದು ಅವುಗಳ ಅವಶೇಷಗಳು ಕಂಡು ಬರುತ್ತವೆ. ಕೋಟೆ ಹಾಗೂ ಅದರ ಸುತ್ತಲೂ ಇಟ್ಟಿಗೆಯ ಕುರುಹುಗಳು ಮತ್ತು ಹೇರಳವಾಗಿ ಹರಡಿರುವ ಕೆಂಪು ಬಣ್ಣದ ದಿಣ್ಣೆಗಳು ಕಂಡುಬಂದಿದ್ದು ಇವುಗಳನ್ನು ನೋಡಿದರೆ ಇಲ್ಲಿ ಪ್ರಾಚೀನ ಕಾಲದಲ್ಲಿ ದೊಡ್ಡ ಊರು ಇತ್ತೆಂದು ಊಹಿಸಲು ಅವಕಾಶವಿದೆ. ಈ ಪ್ರದೇಶವು ಐತಿಹಾಸಿಕವಾಗಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದ್ದು ನಾನು ಸಂಶೋಧನೆಯ ದೃಷ್ಠಿಯಿಂದ ಕ್ಷೇತ್ರ ಕಾರ್ಯ ಕೈಗೊಂಡಾಗ ನನಗೆ ಹಲವಾರು ರೀತಿಯ ಸ್ಮಾರಕ ಶಿಲ್ಪಗಳು ಕಂಡುಬಂದಿದ್ದು ಈ ಸ್ಮಾರಕಗಳು ಇತಿಹಾಸದ ದೃಷ್ಠಿಯಿಂದ ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆ ಹೀಗಾಗಿ ಇಲ್ಲಿ ದೊರೆತ ಸ್ಮಾರಕಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

ವೀರಗಲ್ಲುಗಳು ಎಂದರೆ ನಾಡಿಗಾಗಿ ಮಡಿದ ವೀರರನ್ನು ವ್ಯಕ್ತಪಡಿಸುವ ಕಲ್ಲುಗಳಿಗೆ ವೀರಗಲ್ಲು ಎಂದು ಕರೆಯುತ್ತೇವೆ. ವೀರರೆಂದರೆ ವಿಶಿಷ್ಠವಾದ ಪರಾಕ್ರಮದಿಂದ ಯುದ್ಧ ನೈಪುಣ್ಯವಿರುವ ಹಾಗೂ ಸಾಹಸ ಕೆಲಸಗಳನ್ನು ಮಾಡುವ ಯೋಧ ಎಂಬ ಅಭಿಪ್ರಾಯ ಮೂಡುವ ಸಾಮಾನ್ಯ ಆದರೆ ಈ ಪದವನ್ನು ಸಾಮಾಜಿಕ ಜೀವನದ ಚೌಕಟ್ಟಿಗೆ ಸೇರಿಸಿ ನೋಡಿದಾಗ ಅದರ ಅರ್ಥ ವಿಶಾಲಗೊಳ್ಳುತ್ತದೆ. ವೀರತ್ವದಲ್ಲಿ ಶೌರ್ಯದ ಜೊತೆಗೆ ಸಾಮಾಜಿಕ ಜೀವನದ ಉದಾತ್ತ ಮೌಲ್ಯಗಳು ಅಡಗಿವೆ ಈ ಅರ್ಥದಲ್ಲಿ ದೇಶಕ್ಕಾಗಿ ಮತ್ತು ತನ್ನ ಒಡೆಯನಿಗಾಗಿ ಹಾಗೂ ಸಮಾಜದ ಅಭಿವೃದ್ಧಿಗಾಗಿ ಸಾಮಾಜಿಕ ಮೌಲ್ಯಗಳ ರಕ್ಷಣೆ ಸ್ಥಾಪನೆಗಾಗಿ ತಮ್ಮ ಪ್ರಾಣವನ್ನು ಮುಡಿಪಾಗಿಟ್ಟು ಹೋರಾಡಿ ಮಡಿದ ವ್ಯಕ್ತಿಗಳನ್ನು ವೀರರೂ ಎಂದು ಕರೆಯಲಾಗುತ್ತದೆ. ಇನ್ನೂ ಸೂಕ್ಷವಾಗಿ ಪರಿಶೀಲಿಸಿದಾಗ ಕೇವಲ ಹೋರಾಟದಲ್ಲಿ ಮಡಿದ ವ್ಯಕ್ತಿಗಳನ್ನು ಮಾತ್ರವಲ್ಲದೆ ಅರಸರ ಹಿತ ರಕ್ಷಣೆಗಾಗಿಯೂ, ವೈಯಕ್ತಿಕ ಮೋಕ್ಷಾಪೇಕ್ಷೆಯಿಂದಲೂ ಊರಿನ ಅನಿಷ್ಟಗಳ ನಿವಾರಣೆಗಾಗಿಯೂ ತಾವೇ ಹಿಂಸಾತ್ಮಕ ರೀತಿಯಲ್ಲಿ ಆತ್ಮಬಲಿ ಮಾಡಿಕೊಂಡು ಮಡಿದ ವ್ಯಕ್ತಿಗಳನ್ನು ವೀರರೆಂದೇ ಪರಿಗಣಿಸಲಾಗುತ್ತದೆ. ಇಲ್ಲಿ ಇವರ ಸಾವಿನ ರೀತಿಯನ್ನು

[1]. ಸಂಶೋಧನಾ ವಿದ್ಯಾರ್ಥಿ,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ ಮಾನಸ ಗಂಗೋತ್ರಿ ಮೈಸೂರು

ಪರಿಗಣಿಸದೇ ಸಾವಿನ ಹಿಂದೆ ಇವರ ಮನೋಧರ್ಮ ಅವರ ಬಗ್ಗೆ ಜನರಲ್ಲಿ ಮಾಸಿದ ಗೌರವ ಭಾವನೆಯನ್ನು ಗುರುತಿಸಿದಾಗ ಇವರು ಯುದ್ಧ ವೀರರಿಗೆ ಸಮಾನವಾದ ವೀರರು ಎಂಬುದರಲ್ಲಿ ಸಂಶಯವಿಲ್ಲ. ಇಂತಹ ವೀರ ಪರಂಪರೆಯ ಬಗ್ಗೆ ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದಲ್ಲಿ ಅಪಾರವಾದ ಗೌರವವಿದೆ. ಇವರಿಗಾಗಿಯೇ ವೀರ ಸ್ವರ್ಗದ ಕಲ್ಪನೆ ಹುಟ್ಟಿಕೊಂಡಿದೆ. ಧರ್ಮ ವೀರನಿಗೆ ಲಭಿಸುವ ಮೋಕ್ಷವು  ಧಾರ್ಮಿಕ ಹಾಗೂ ಲೌಖಿಕ ಬಲಿದಾನಗಳಿಂದಲೂ ಲಭಿಸುತ್ತದೆ. ಎಂಬ ನಂಬಿಕೆಗಳು ಬೆಳೆದವು ಇಂತಹ ವೀರರ ಸ್ಮರಣಾರ್ಥ ನಿರ್ಮಿಸಿರುವ ಸ್ಮಾರಕಗಳನ್ನು ವೀರ ಸ್ಮಾರಕಗಳು ಎಂದು ಕರೆಯಲಾಗಿವೆ. ಇವು ಇಂದಿಗೂ ಉಳಿದುಕೊಂಡು ಬಂದಿದ್ದು ವೀರ ಪರಂಪರೆಯ ಬಗ್ಗೆ ವಿಶ್ವಾಸನೀಯ ಮಾಹಿತಿ ನೀಡುತ್ತದೆ.

ಮಾಸ್ತಿಗಲ್ಲು ಎಂದರೆ ಯಾವುದೇ ಒಬ್ಬ ವೃದ್ಧಪ್ಯದಿಂದಾಗಲೀ, ಅನಾರೋಗ್ಯದಿಂದಾಗಲೀ, ಯುದ್ಧದಲ್ಲಾಗಲೀ ಅಥವಾ ಮತ್ತಾವುದೇ ಕಾರಣದಿಂದಾಗಲೀ ಮರಣಿಸಿದಾಗ ಆತನ ಪತ್ನಿ ಅಥವಾ ಪತ್ನಿಯರು ಸಹಗಮನ ಮಾಡುತ್ತಿದ್ದರು ಇಂತಹವರು ಮಹಾಸತಿಯರೆಂದು ಕರೆಸಿಕೊಂಡರು ಇವರ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕಗಳನ್ನು ಮಹಾಸತಿಗಲ್ಲು ಅಥವಾ ಮಾಸ್ತಿಗಲ್ಲು ಎಂದು ಕರೆಯಲಾಗುತ್ತದೆ. ಇವು ಇಂದಿಗೂ ಉಳಿದುಕೊಂಡು ಬಂದಿದ್ದು ಮಹಾಸತಿ ಪರಂಪರೆಯ ಬಗ್ಗೆ ವಿಶ್ವಾಸನೀಯ ಮಾಹಿತಿಯನ್ನು ನೀಡುತ್ತವೆ.

ಸತ್ತ ವ್ಯಕ್ತಿಯೊಡನೆ ಅವನ ಪ್ರಿಯ ವಸ್ತುಗಳನ್ನು ಹೂಳಬೇಕು ಇಲ್ಲವೇ ಸುಡಬೇಕು ಎಂಬ ಭಾವನೆ ಈ ಸಂಪ್ರದಾಯಕ್ಕೆ  ದಾರಿಮಾಡಿಕೊಟ್ಟಿರಬಹುದಾದರೂ ಇದರ ಉಗಮಕ್ಕೆ ಹಲವಾರು ಕಾರಣಗಳನ್ನು ನೋಡಬಹುದು ಇದು ಧಾರ್ಮಿಕ ಮುಖವಾಡವನ್ನು ಧರಿಸಿ ಈ ಪರಂಪರೆಯು ವೈಭವದ ಪ್ರಚಾರ ಪಡೆಯಿತು ಎಂದಾದರೆ ಕೆಲವೊಮ್ಮೆ ಪ್ರತಿಷ್ಠೆಗೆ ಬಲಿಯಾಗಿ ಯಾವುದೋ ಒತ್ತಡಕ್ಕೆ ಒಳಗಾಗಿ ಅನೇಕ ಸ್ತ್ರೀಯರು ಸಹಗಮನವನ್ನು ಆಚರಿಸಿ ಮಹಾಸತಿ ಪರಂಪರೆಯನ್ನು ಬೆಳೆಸಿದ್ದಾರೆ.

**1. ವೀರಗಲ್ಲು** : ಈ ವೀರಗಲ್ಲು 2 ಅಡಿ ಉದ್ದ 1.5 ಅಡಿ ಅಗಲ 5 ಇಂಚು ದಪ್ಪವಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಆರು ಜನ ವೀರರು ಹಾರವಾಗಿರುವ ದೃಶ್ಯವನ್ನು ಕಾಣಬಹುದು. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮರಣ ಹೊಂದಿದ ಒಬ್ಬ ವೀರನನ್ನು ಇಬ್ಬರು ಚಾಮಧಾರಿಣಿ ದೇವಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಮೂರನೇ ಪಟ್ಟಿಕೆಯಲ್ಲಿ ಯತಿಯೂ ಶಿವಲಿಂಗಕ್ಕೆ ಪೂಜಾ ಕೈಂಕರ್ಯಗಳು ನೆರವೇರಿಸುತ್ತಿದ್ದು ಬಲ ಭಾಗದಲ್ಲಿ ನಾರಿಯ ಶಿಲ್ಪ ಹಾಗೂ ಎಡ ಭಾಗದಲ್ಲಿ ಭಕ್ತನು ಕೈಮುಗಿದು ಕುಳಿತಿರುವ ದೃಶ್ಯವಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪಗಳನ್ನು ಕಾಣಬಹುದಾಗಿದೆ.

**2. ಮೂರ್ತಿಶಿಲ್ಪ ಕುದುರೆಯ ಮೇಲೆ ಕುಳಿತ ರಾಜ** :ಹರಳುಕೋಟೆ ಗ್ರಾಮದಲ್ಲಿ ದೊರೆತಿರುವ ಈ ಸುಂದರವಾದ ಗ್ರಾನೈಟ್ ಕಲ್ಲಿನ ಶಿಲ್ಪವು ಎರಡು ಪಟ್ಟಿಕೆಯಿಂದ ಕೂಡಿದೆ. ಮೊದಲನೆ ಪಟ್ಟಿಕೆಯಲ್ಲಿ ಸುಂದರವಾದ ಮತ್ತು ಬಲಯುತವಾದ ರಾಜ ಕುದುರೆಯ ಮೇಲೆ ಕುಳಿತಿರುವ ದೃಶ್ಯ ಕಂಡುಬರುತ್ತದೆ. ಇದು ಅಸ್ಪಷ್ಟವಾಗಿ ಗೋಚರಿಸುತ್ತದೆ. ಎರಡನೇ ಪಟ್ಟಿಕೆಯಲ್ಲಿಯೂ ಸಹ ರಾಜ ಕುದುರೆಯ ಮೇಲೆ ಕುಳಿತಿರುವ ದೃಶ್ಯವನ್ನು ಸುಂದರವಾಗಿ ಕಂಡರಿಸಿದ್ದು ರಾಜ ಬಲಗೈಯಲ್ಲಿ ಲಗಾಮು ಹಿಡಿದಿದ್ದು ತಲೆಯ ಕೂದಲನ್ನು ಉಂಡೆಯಂತೆ ಕಟ್ಟಿದ್ದು ವೀರನ ಕರ್ಣಕುಂಡಲವು ಸುಂದರವಾಗಿ ಮೂಡಿ ಬಂದಿದೆ ಮೀಸೆಯನ್ನು ಸಹ ಹೊಂದಿದ್ದಾನೆ. ಇದರಿಂದ ಇವನನ್ನು ಒಬ್ಬ ಸಾಮಾನ್ಯ ಮನಷ್ಯನ ಬದಲಿಗೆ ಸೈನ್ಯಕ್ಕೆ ಸೇರಿದ ಒಬ್ಬ ಉತ್ತಮವಾದಂತಹ ಪದವಿಯನ್ನು ಹೊಂದಿದ ವ್ಯಕ್ತಿ ಎಂದು ಗುರುತಿಸಬಹುದು.

**3. ಇಕ್ಕೈ ಮಾಸ್ತಿಗಲ್ಲು – ಕುದರೆ ಕಾಳಗದ ಶಿಲ್ಪ** :ಈ ಇಕ್ಕೈ ಮಾಸ್ತಿಗಲ್ಲು 3 ಅಡಿ ಉದ್ದ 2.5 ಅಡಿ ಅಗಲ 6 ಇಂಚು ದಪ್ಪವಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ವೀರ ಯೋಧರು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಯುದ್ಧಕ್ಕೆ ಹೊರಟ ಸಂದರ್ಭದಲ್ಲಿ ತನ್ನ ತಾಯಿಯು ಇಕ್ಕೈಗಳಲ್ಲಿ ಫಲವಾದ ನಿಂಬೆ ಹಣ್ಣನ್ನು ಹಿಡಿದು ಶುಭ ಸಂಕೇತದೊಂದಿಗೆ ಯುದ್ಧದಲ್ಲಿ ಒಳ್ಳೆಯದಾಗಲೀ ಶುಭವಾಗಲೀ, ಜಯವಾಗಲೀ ಎಂದು ಹರಸುತ್ತಿರುವ ದೃಶ್ಯ ಕಂಡುಬರುತ್ತದೆ. ಎರಡನೇಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಮೂರು ಜನ ವೀರರನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಮೂರನೆ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯೂ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಎಡಭಾಗದಲ್ಲಿ ಮೂರು ಜನ ವೀರರು ಕೈಮುಗಿದು ಕುಳಿತಿರುವ ದೃಶ್ಯವಿದ್ದು ಬಲಭಾಗದಲ್ಲಿ ನಂದಿಯ ಶಿಲ್ಪವನ್ನು ಕಂಡರಿಸಲಾಗಿದೆ.

4. **ಇಕ್ಕೈ ಮಾಸ್ತಿಗಲ್ಲು – ಕುದುರೆ ಕಾಳಗದ ಶಿಲ್ಪ** : ಇಕ್ಕೈ ಮಾಸ್ತಿಗಲ್ಲು 3 ಅಡಿ ಉದ್ದ 2.5 ಅಡಿ ಅಗಲ 6 ಇಂಚು ದಪ್ಪವಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ವೀರ ಯೋಧರು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಯುದ್ಧಕ್ಕೆ ಹೊರಟ ಸಂದರ್ಭದಲ್ಲಿ ತನ್ನ ತಾಯಿಯು ಇಕ್ಕೈಗಳನ್ನು ಮೇಲೆತ್ತಿ ಹಿಡಿದು ಯುದ್ಧದಲ್ಲಿ ಶುಭವಾಗಲೀ, ಜಯವಾಗಲೀ ಎಂದು ಹರಸುತ್ತಿರುವ ದೃಶ್ಯ ಕಂಡುಬರುತ್ತದೆ. ಜೊತೆಗೆ ಬಲಭಾಗದಲ್ಲಿ ನಂದಿಯ ಶಿಲ್ಪ ಹಾಗೂ ಎಡಭಾಗದಲ್ಲಿ ಆಜಿಜನೇಯ ಸ್ವಾಮಿಯ ಶಿಲ್ಪಗಳನ್ನು ಕಂಡರಿಸಲಾಗಿದೆ. ಎರಡನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಮೂರು ಜನ ವೀರರು ಕೈಮುಗಿದು ಕುಳಿತಿರುವ ದೃಶ್ಯವಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿದ್ದು ಜೊತೆಗೆ ವಿವಿಧ ಬಗೆಯ ಹೂಬಳ್ಳಿ ಮಾದರಿಯ ಅಲಂಕಾರಿಕ ಕೆತ್ತನೆಗಳನ್ನು ಕಂಡರಿಸಲಾಗಿದೆ.

**೫. ಸ್ಮಾರಕ ಶಿಲ್ಪ** :ಈ ಶಿಲ್ಪವು 2.5 ಅಡಿ ಉದ್ದ 2 ಅಡಿ ಅಗಲವಿದ್ದು 6 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದ್ದು ಇದರಲ್ಲಿ ವೀರ ಯೋಧನನ್ನು ಸುಂದರವಾಗಿ ಕಡೆಯಲಾಗಿದೆ. ಇದರಿಂದ ಯೋಧ ಸ್ಥಳೀಯ ಪ್ರಾಂತ್ಯದವನೇ ಇರಬಹುದು ಈತ ಒಬ್ಬ ಜಟ್ಟಿಯ ರೀತಿಯಲ್ಲಿ ಪಂಚೆ (ವಸ್ತ್ರ) ಯನ್ನು ಕಚ್ಚೆಯಂತೆ ಕಟ್ಟಿರುವುದು ಸುಂದರವಾಗಿ ಮೂಡಿ ಬಂದಿದ್ದು ಈತನು ಕಂಠದಲ್ಲಿ ಸರ ಮಾಲೆಯನ್ನು ಧರಿಸಿದ್ದು ಮತ್ತು ಕೈಗಳಿಗೆ ತೋಳುಬಂದಿಯನ್ನು ಧರಿಸಿದ್ದು ತುಂಬಿದ ಅಗಲವಾದ ದಪ್ಪನೆಯ ಮೀಸೆ ಸುಂದರ ಆಕರ್ಷಕ ಕಣ್ಣುಗಳು ಸುಂದರವಾಗಿ ಶಿಲ್ಪ ಕಲೆಯಲ್ಲಿ ಮೂಡಿ ಬಂದಿದೆ. ಈತನು ಕೈಗಳಲ್ಲಿ ಆಯುಧವನ್ನು ಹಿಡಿದಿದ್ದು ಒಂದು ಯುದ್ಧದಲ್ಲಿ ಹೋರಾಟದ ದೃಶ್ಯದಂತೆ ಚಿತ್ರದಲ್ಲಿ ಮೂಡಿ ಬಂದಿದೆ. ಈ ಹಿನ್ನೆಲೆಯಲ್ಲಿ ಇದನ್ನು ಒಂದು ವೀರ ಯೋಧನ ಶಿಲ್ಪವೆಂದು ಪರಿಗಣಿಸಬಹುದು.

**೬.ವೀರಗಲ್ಲು** :ಈ ವೀರಗಲ್ಲು 3.5 ಅಡಿ ಎತ್ತರ 3 ಅಡಿ ಅಗಲ 5 ಇಂಚು ದಪ್ಪವಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೆಯ ಪಟ್ಟಿಕೆಯಲ್ಲಿ ವೀರ ಯೋಧರಿಬ್ಬರು ಆಯುಧೋಪಕರಣಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ವೀರನನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಯತಿಯೂ ಶಿಲ್ಪಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ಎಡ ಭಾಗದಲ್ಲಿ ಯುದ್ಧದಲ್ಲಿ ಮಡಿದ ವೀರನು ಕೈ ಮುಗಿದು ಕುಳಿತಿರುವ ದೃಶ್ಯವನ್ನು ಹಾಗೂ ಬಲ ಭಾಗದಲ್ಲಿ ನಂದಿಯ ಶಿಲ್ಪವನ್ನು ಸುಂದರವಾಗಿ ಕಂಡರಿಸಲಾಗಿದೆ.

**7. ವೀರಗಲ್ಲು** :ಈ ವೀರಗಲ್ಲು 4 ಅಡಿ ಎತ್ತರ 3.5 ಅಡಿ ಅಗಲ 5 ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇಯ ಪಟ್ಟಿಕೆಯಲ್ಲಿ ವೀರ ಯೋಧರಿಬ್ಬರು ಕತ್ತಿ ಗುರಾಣಿಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯ ಕಂಡು ಬಂದಿದ್ದು ಇದನ್ನು ಸ್ತ್ರೀಯೊಬ್ಬರು ನಿಂತು ನೋಡುತ್ತಿರುವ ದೃಶ್ಯವನ್ನು ಕಂಡರಿಸಲಾಗಿದೆ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಮಡಿದ ಇಬ್ಬರು ವೀರರನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು. ಮೂರನೇ ಪಟ್ಟಿಕೆಯಲ್ಲಿ ಬಲ ಭಾಗದಲ್ಲಿ ಸುಂದರವಾಗಿ ಶಿವಲಿಂಗವನ್ನು ಕಂಡರಿಸಿದ್ದು ಯತಿಯೂ ಲಿಂಗಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವ ದೃಶ್ಯವಿದ್ದು ಪಕ್ಕದಲ್ಲಿಯೇ ನಂದಿಯ ಶಿಲ್ಪವನ್ನು ಕಾಣಬಹುದು ಹಾಗೂ ಎಡಭಾಗದಲ್ಲಿ ಭಕ್ತರು ಕುಳಿತಿರುವ ಹಾಗೂ ಸ್ತ್ರೀಯೊಬ್ಬಳು ನಿಂತಿರುವ ಚಿತ್ರವನ್ನು ಕಂಡರಿಸಲಾಗಿದ್ದು ಇಬ್ಬರು ವಸ್ತ್ರವನ್ನು ಧರಿಸಿದ್ದು ವಿವಿಧ ರೀತಿಯಿಂದ ಆಭರಣಗಳನ್ನು ಧರಿಸಿದ್ದು ಚಿತ್ರವು ಮನೋಜ್ಞವಾಗಿ

ಮೂಡಿಬಂದಿದೆ. ಜೊತೆಗೆ ವಿವಿಧ ರೀತಿಯಾದ ಅಲಂಕಾರವಾದ ಹೂ ಬಳ್ಳಿ ಮಾದರಿಯ ಚಿತ್ರಗಳನ್ನು ಬಹಳ ಸುಂದರವಾಗಿ ಕಂಡರಿಸಿರುವುದು ಕಾಣಬಹುದಾಗಿದೆ.

೮. **ವೀರಗಲ್ಲು** :ಈ ವೀರಗಲ್ಲು 4 ಅಡಿ ಎತ್ತರ ೩.5 ಅಡಿ ಅಗಲ 5 ಇಂಚು ದಪ್ಪವಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇಯ ಪಟ್ಟಿಕೆಯಲ್ಲಿ ವೀರ ಯೋಧರಿಬ್ಬರು ಕತ್ತಿ ಗುರಾಣಿಗಳನ್ನು ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ಸ್ತ್ರೀಯೊಬ್ಬಳು ನಿಂತು ನೋಡುತ್ತಿರುವ ದೃಶ್ಯವನ್ನು ಕಾಣಬಹುದು. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ಇಬ್ಬರು ವೀರ ಯೋಧರನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವನ್ನು ಕಾಣಬಹುದು. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯೂ ಪೂಜಾ ಕೈಂಕಾರ್ಯಗಳನ್ನು ನೆರವೇರಿಸುತ್ತಿದ್ದು ಎಡಭಾಗದಲ್ಲಿ ಭಕ್ತರೊಬ್ಬರು ಕೈಮುಗಿದು ಕುಳಿತಿರುವ ದೃಶ್ಯ ಬಲ ಭಾಗದಲ್ಲಿ ನಂದಿಯ ಶಿಲ್ಪ ಕಂಡುಬಂದಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪವನ್ನು ಕಂಡರಿಸಲಾಗಿದೆ.

**೯. ವೀರಗಲ್ಲು** :ಈ ವೀರಗಲ್ಲು ೨ ಅಡಿ ಉದ್ದ ೨ ಅಡಿ ಅಗಲ 5 ಇಂಚು ದಪ್ಪವಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದೆ. ಶಿಲ್ಪದಲ್ಲಿ ಮಾವುತ, ಆನೆ ಹಾಗೂ ನಾಯಿಯ ಶಿಲ್ಪವನ್ನು ಕಂಡರಿಸಲಾಗಿದೆ.

**೧೦. ವೀರಗಲ್ಲು – ಗಜಕಾಳಗ** :ಈ ವೀರಗಲ್ಲು ೩ ಅಡಿ ಉದ್ದ, ೨ ಅಡಿ ಅಗಲ 5 ಇಂಚು ದಪ್ಪವಾಗಿದ್ದ ಗ್ರಾನೈಟ್ ಕಲ್ಲಿನದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಮಾವುತನು ಆನೆಯನ್ನು ಹಿಡಿದು ನಿಂತಿರುವುದು ಹಾಗೂ ಹಿಂಬದಿಯಲ್ಲಿ ನಾಯಿಯ ಶಿಲ್ಪವನ್ನು ಕಂಡರಿಸಲಾಗಿದೆ. ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮರಣ ಹೊಂದಿದ ಮಾವುತ, ಆನೆ ಹಾಗೂ ನಾಯಿಯನ್ನು ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯನ್ನು ಕಾಣಬಹುದು ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದು ನಾಲ್ಕು ಜನ ವೀರರು ಕೈಮುಗಿದು ನಿಂತಿರುವ ದೃಶ್ಯವಿದ್ದು ಬಲ ಭಾಗದಲ್ಲಿ ನಂದಿಯ ಶಿಲ್ಪವನ್ನು ಕಂಡರಿಸಲಾಗಿದೆ.

ಒಟ್ಟಾರೆ ಮೇಲಿನ ಅಂಶಗಳನ್ನು ಗಮನಿಸಿದಾಗ ಹರಳುಕೋಟೆ ಗ್ರಾಮದಲ್ಲಿ ದೊರೆತ ಸ್ಮಾರಕ ಶಿಲ್ಪಗಳಲ್ಲಿರುವ ಧರ್ಮಿಕ ಹಿನ್ನೆಲೆಯ ಹಾದಿಯಲ್ಲಿ ಶೈವ ಸಂಸ್ಕೃತಿಯನ್ನು ಸಾರುವ ಪರಿಕರಗಳಾಗಿದ್ದು ಶಿಲ್ಪಗಳಲ್ಲಿ ಶಿವಲಿಂಗ, ಸೂರ್ಯ, ಚಂದ್ರ ಮತ್ತು ನಂದಿಯ ಶಿಲ್ಪವಿದ್ದು ಇವುಗಳನ್ನು ಅಧ್ಯಯನಕ್ಕೆ

ಒಳಪಡಿಸಿದಾಗ ಇಲ್ಲಿ ಶೈವ ಧರ್ಮದ ಆಚರಣೆ ಹೆಚ್ಚಾಗಿದ್ದು ಇಲ್ಲಿ ಶೈವ ಪರಂಪರೆಯ ಸಂಸ್ಕೃತಿಯನ್ನು ಸಾರುತ್ತದೆ. ಎಂದು ಹೇಳಬಹುದಾಗಿದೆ.

**ಛಾಯಾಚಿತ್ರಗಳು :**







**1.**ವೀರಗಲ್ಲು 2. ಕುದುರೆಯ ಮೇಲೆ ಕುಳಿತ ರಾಜ 3.ಇಕ್ಕೈ ಮಾಸ್ತಿಗಲ್ಲು ಕುದುರೆ ಕಾಳಗದ ಶಿಲ್ಪ







**4.**ಇಕ್ಕೈ ಮಾಸ್ತಿಗಲ್ಲು ಕುದುರೆ ಕಾಳಗ 5. ಸ್ಮಾರಕಶಿಲ್ಪ 6. ವೀರಗಲ್ಲು



7. ವೀರಗಲ್ಲು



8. ವೀರಗಲ್ಲು



9. ವೀರಗಲ್ಲು



10.ಗಜಕಾಳಗ

## ಗ್ರಂಥಋಣ :


1. ಕನ್ನಡ ವಿಷಯ ವಿಶ್ವಕೋಶ–ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು–2005
2. ಸೂರ್ಯನಾಥ ಕಾಮತ್ ಯು (ಸಂ) – ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1 ಕರ್ನಾಟಕ ಸರ್ಕಾರ, ಬೆಂಗಳೂರು–1984
3. ಮಲೆಯೂರು ಗುರುಸ್ವಾಮಿ (ಪ್ರ.ಸಂ)–ಹೊನ್ನುಹೊಳೆ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು–2007
4. ಶೇಷಶಾಸ್ತ್ರಿ ಆರ್. – ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2010
5. ಪರಮಶಿವಮೂರ್ತಿ ಡಿ.ವಿ. ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1999
6. ಕಾಳಸ್ವಾಮಿ,ಹೆಚ್.ಎನ್.–ಪುರಾತತ್ವ ಸಂಶೋಧನೆ, ಸಂ–1, ರಚನ ಪ್ರಕಾಶನ,ಮೈಸೂರು–2014
7. ಕಾಳಸ್ವಾಮಿ,ಹೆಚ್.ಎನ್.–ಪುರಾತತ್ವ ಸಂಶೋಧನೆ,ಸಂ–2 ರಚನ ಪ್ರಕಾಶನ,ಮೈಸೂರು–2016
8. ಫೋಟೊದಲ್ಲಿನ ಚಿತ್ರಗಳನ್ನು ಗಮನಿಸಿ – 1 ರಿಂದ 10